# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Vaayu Renewable Energy (Sironj) Private Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಮುಂಡರಗಿ ಮತ್ತು ಕುಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 98.7 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s IRIS Renewables Two Private Limited ಕಂಪನಿಗೆ ವರ್ಗಾಯಿಸಿ, ವರ್ಗಾಯಿಸಿದ ಸಾಮರ್ಥ್ಯವನ್ನು 302.88 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

**ಓದಲಾಗಿದೆ :** 1) ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 159 ಎನ್‌ಸಿಇ 2021, ದಿನಾಂಕ: 29.07.2021

2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/ 08/ IRTPL-302.88 MW (VRESPL – 98.7 MW)/Gadag/F-44/ (2023)/896, ದಿನಾಂಕ:20.03.2023.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ.(1)ರ ಸರ್ಕಾರಿ ಆದೇಶದಲ್ಲಿ M/s Vaayu Renewable Energy (Sironj) Private Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಮುಂಡರಗಿ ಮತ್ತು ಕುಕನೂರು ತಾಲ್ಲೂಕುಗಳ ಹರ್ಲಾಪುರ, ತಿಮ್ಮಾಪುರ, ಕಂಗಿನಾಲ್, ಕೋಟ್ ಉಮಚಗಿ, ಶಿರೂರು, ಹಳ್ಳಿಗುಡಿ ಮತ್ತು ಹಳ್ಳಿಕೇರಿ ಗ್ರಾಮಗಳಲ್ಲಿ 98.7 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರ.ಸಂ. (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Vaayu Renewable Energy (Sironj) Private Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಮುಂಡರಗಿ ಮತ್ತು ಕುಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 98.7 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s IRIS Renewables Two Private Limited ಕಂಪನಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು 302.88 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ISTS ವರ್ಗದ ಬದಲಾಗಿ InSTS ವರ್ಗದಡಿ ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿ ನೀಡುವಂತೆ M/s IRIS Renewables Two Private Limited ಇವರು ಕೆ.ಆರ್.ಇ.ಡಿ.ಎಲ್. ನಿಯಮಿತವನ್ನು ಕೋರಿ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಿರುವುದಾಗಿ, ಸದರಿ ವರ್ಗಾವಣೆಗೆ ಎರಡು ಕಂಪನಿಯವರು ಸಹಮತಿ ನೀಡಿರುವುದಾಗಿ ಮತ್ತು ಅನ್ವಯಿಸುವ ವರ್ಗಾವಣೆ ಶುಲ್ಕವನ್ನು ಪಾವತಿಸಿರುವುದರಿಂದ, M/s Vaayu Renewable Energy (Sironj) Private Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಮುಂಡರಗಿ ಮತ್ತು ಕುಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 98.7 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s IRIS Renewables Two Private Limited ಕಂಪನಿಗೆ ವರ್ಗಾಯಿಸಿ, ಸದರಿ ಯೋಜನೆಗೆ ಸಂಬಂಧಿಸಿದಂತೆ ಟೋಪೊಶೀಟ್ ಸಂಖ್ಯೆ:48 M/15 ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಳದಲ್ಲಿ ಸದರಿಯವರು 98 ವಿಂಡ್ ಟರ್ಬೈನ್ ಗಳನ್ನು (62 Nos. X 3.3 MW of Envision make + 36 Nos. X 2.730 MW of GE make) ಅಳವಡಿಸಲು ಪ್ರತಿ ಟರ್ಬೈನ್ ಗೆ 10 ಎಕರೆಯಂತೆ ಒಟ್ಟು 980 ಎಕರೆ (98 WTGs x 10 Acres=980 acres) ಜಮೀನನ್ನು ಉಪಯೋಗಿಸಬಹುದಾಗಿದೆ ಎಂದು ಸದರಿ ಯೋಜನೆಯ ಚೆಕ್‌ಲಿಸ್ಟನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

M/s IRIS Renewables Two Private Limited ಕಂಪನಿಯು ಅರ್ಜಿಯೊಂದಿಗೆ ಪಾವತಿಸಬೇಕಾಗಿರುವ ಒಟ್ಟು ಸಂಸ್ಕರಣಾ ಶುಲ್ಕದಲ್ಲಿ 30% ಮೊತ್ತವನ್ನು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಂದಾಯ ಮಾಡಿರುತ್ತಾರೆ. ಬಾಕಿ 70% ರಷ್ಟು ಮೊತ್ತವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಪಾವತಿಸಬೇಕಾಗಿರುತ್ತದೆ.

….2

M/s IRIS Renewables Two Private Limited ಕಂಪನಿಯು ದಿನಾಂಕ:28.12.2022ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ನವದೆಹಲಿಯಲ್ಲಿ ಸ್ಥಾಪಿತಗೊಂಡಿದೆ. ಸದರಿ ಕಂಪನಿಯು M/s Copenhagen Infrastructure New Markets Fund I K/S ಇವರಿಂದ ಸ್ಥಾಪಿಸಲ್ಪಟ್ಟ SPV ಕಂಪನಿಯಾಗಿರುತ್ತದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.12.2022ರ ಅಂತ್ಯಕ್ಕೆ ರೂ.594.84 ಕೋಟಿಗಳಾಗಿರುತ್ತದೆ ಎಂದು ಕೆ.ಆರ್.ಇ.ಡಿ.ಎಲ್.ನಿಯಮಿತವು ತಿಳಿಸಿರುತ್ತದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಸಂಬಂಧಿಸಿದಂತೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯವನ್ನು ನೀಡುವ ವಿಷಯದಲ್ಲಿ ದಿನಾಂಕ:19.01.2023ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ:

Banking shall be permitted on a monthly basis on payment of applicable charges as determined by the Commission in separate orders issued from time to time.

Provided that the unutilised banked energy remaining at the end of the month shall not be permitted to be carried forward to subsequent months. However, RE generating station would be entitled to RECs for such energy remaining unutilised at the end of the month.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ರಿಟ್ ಅರ್ಜಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27 ನೀತಿಯನ್ನು ಪ್ರಶ್ನಿಸಿ M/s Solar Power Developers Association ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 17.08.2022 ರ ಮಧ್ಯಂತರ ಆದೇಶದಲ್ಲಿ ಸದರಿ ನೀತಿಗೆ ತಡೆಯಾಜ್ಞೆ ನೀಡಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶಕ್ಕೊಳಪಟ್ಟು, ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ 161 ಎನ್‌ಸಿಇ 2023**
**ಬೆಂಗಳೂರು, ದಿನಾಂಕ :27/03/2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Vaayu Renewable Energy (Sironj) Private Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಮುಂಡರಗಿ ಮತ್ತು ಕುಕನೂರು ತಾಲ್ಲೂಕುಗಳ ಹರ್ಲಾಪುರ, ತಿಮ್ಮಾಪುರ, ಕಂಗಿನಾಲ್, ಕೋಟ್ ಉಮಚಗಿ, ಶಿರೂರು, ಹಳ್ಳಿಗುಡಿ ಮತ್ತು ಹಳ್ಳಿಕೇರಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 98.7 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s IRIS Renewables Two Private Limited ಕಂಪನಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ 302.88 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಆದೇಶಿಸಿದೆ.

**Tentative Village, Sy. No. & WTG Co-ordinate details for transfer of 98.7 MW capacity Wind Power Project of M/s Vaayu Renewable Energy (Sironj) Private Limited in favour of M/s Iris Renewables Two Private Limited and Enhancement of capacity from 98.7 MW to 302.88 MW (3.3 MW x 62 Nos of WTGs + 2.730MW x 36 Nos of WTGs =302.88 MW)**

| WTG. No. | LATITUDE | LONGITUDE | Sy No | Village | Taluk | District |
|---|---|---|---|---|---|---|
| 1 | 15° 28' 38.8699" N | 75° 43' 59.2616" E | 266 | Kanaginahala | Gadag | Gadag |

....3